ಸಣ್ ಸುದ್ದಿ

ಕ್ರಿಕೆಟ್ ವಿಚಾರದಲ್ಲಿ ಎರಡು ಗುಂಪುಗಳ ಮಧ್ಯೆ ಮಾರಾಮಾರಿ

ಅಫಜಲ್ಪುರ/ ಚವಡಾಪುರ: ಕ್ರಿಕೆಟ್ ಆಡುವಾಗ ಶುರುವಾದ ಜಗಳ ತಾರಕ್ಕೇರಿ ಎರಡು ಗುಂಪುಗಳ ಹೊಡೆದಾಟಕ್ಕೆ ಕಾರಣವಾದ ಘಟನೆ ಜಿಲ್ಲೆಯ ಅಫಜಲಪುರ ತಾಲೂಕಿನ ಗೊಬ್ಬರು ಬಿ ಗ್ರಾಮದಲ್ಲಿ ನಡೆದಿದೆ. ನಡು ರಸ್ತೆಯಲ್ಲೆ ಹೊಡದಾಡಿಕೊಂಡು ಯುವಕರ ಗುಂಪಿನಿಂದಾಗಿ ಕೆಲಕಾಲ ಉದ್ವಿಗ್ನ ವಾತಾವರಣ ಉಂಟಾಗಿತ್ತು. ಟೂರ್ನಮೆಂಟ್ ಗೆ ತಂದಿರುವ ಬಾಲ್ ವಿಚಾರದಲ್ಲಿ ಗಲಾಟೆ ನಡೆದಿದೆ ಎಂದು ಗೊತ್ತಾಗಿದೆ. ಬಾಲ್‌ಗೆ ದುಡ್ಡು ನೀಡದ ಹಿನ್ನೆಲೆಯಲ್ಲಿ ಉಂಟಾದ ಚರ್ಚೆಯಿಂದಾಗಿ ಗಲಾಟೆ ಶುರುವಾಗಿ ಯುವಕರ ಗುಂಪುಗಳ ಮಧ್ಯೆ ಮಾರಾಮಾರಿ ನಡೆದಿದೆ. ನಾಲ್ಕು ದಿನದ ಹಿಂದೆ ಕ್ರಿಕೆಟ್ ಟೂರ್ನಮೆಂಟ್ ಮುಕ್ತಾಯ ಗೊಂಡಿತ್ತು. ಟೂರ್ನಮೆಂಟ್‌ಗೆ ತಂದಿದ್ದ ಬಾಲ್‌ನ ಹಣ ನೀಡದ ಹಿನ್ನೆಲೆಯಲ್ಲಿ ನಿನ್ನೆ ಸಂಜೆ ಗಲಾಟೆ ಶುರುವಾಗಿದೆ. ಎರಡು ಗುಂಪುಗಳ ಮಧ್ಯೆ ಮಾರಾಮಾರಿಯಲ್ಲಿ ಮೂರು ಜನರಿಗೆ ಗಾಯವಾಗಿದೆ. ಗಾಯಾಳುಗಳು ಕಲಬುರಗಿ ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗಿದೆ. ದೇವಲ್ ಗಾಣಗಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಸಂಬಂಧ ಪೊಲೀಸರು 15 ಜನರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಆದರ್ಶ ವಿದ್ಯಾಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಿತ್ತಾಪುರ: ಪಟ್ಟಣದ ನಾಗಾವಿ ಕ್ಯಾಂಪಸ್‌ನಲ್ಲಿರುವ ಸರ್ಕಾರಿ ಆದರ್ಶ ವಿದ್ಯಾಲಯ (ಆರ್‌ಎಂಎಸ್‌ಎ) ಶಾಲೆಯಲ್ಲಿ 2022-23ನೇ ಸಾಲಿನ 6ನೇ ತರಗತಿಯ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಮುಖ್ಯಶಿಕ್ಷಕಿ ಸುನಂದಾ ಬಾರಾಡ್ ತಿಳಿಸಿದ್ದಾರೆ. 2021-22ನೇ ಸಾಲಿನಲ್ಲಿ 5ನೇ ತರಗತಿಯಲ್ಲಿ ಕನ್ನಡ, ಆಂಗ್ಲ, ಉರ್ದು ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿರುವ ಚಿತ್ತಾಪುರ ತಾಲೂಕಿನ ನಗರ ಹಾಗೂ ಗ್ರಾಮೀಣ ಪ್ರದೇಶಗಳ ಸರ್ಕಾರಿ, ಅನುದಾನಿತ, ಅನುದಾನ ರಹಿತ ಹಾಗೂ ಇತರೆ ಅಲ್ಪಸಂಖ್ಯಾತರ ಶಾಲೆಗಳ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸುವ ಪ್ರಕ್ರಿಯೆ ಆರಂಭವಾಗಿದ್ದು, ಫೆ.9 ಕೊನೆ ದಿನವಾಗಿದೆ.

ಬೇಸಿಗೆಯಲ್ಲಿ ನೀರಿನ ಸಮಸ್ಯೆಯಾಗದಿರಲಿ

ಜಿಲ್ಲೆಯಲ್ಲಿ ಮೊದಲ ಆದ್ಯತೆಯಾಗಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವಂತೆ ಸಚಿವ ಮುರುಗೇಶ್ ನಿರಾಣಿ ಸೂಚನೆ

• **ಕನ್ನಡಪ್ರಭ ವಾರ್ತೆ** ಕಲಬುರಗಿ

ಜಿಲ್ಲೆಯಲ್ಲಿ ನೀರಿನ ಸಮಸ್ಯೆ ತುಂಬಾ ಇರುವುದರಿಂದ ಮೊದಲ ಆದ್ಯತೆ ನೀಡಿ ಸಮಸ್ಯೆ ಪರಿಹರಿಸುವ ಕೆಲಸವಾಗಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಮುರುಗೇಶ್ ನಿರಾಣಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಶುಕ್ರವಾರ ಗುವಿವಿ ಅಂಬೇಡ್ಕರ್ ಭವನದ ಸಭಾಂಗಣದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆಡಿಪಿ) ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ ಕುಡಿಯುವ ನೀರಿನ ವಿವಿಧ ಹಂತದ ಯೋಜನೆಗಳು ಹಾಗೂ ನೀರಿನ ಪೂರೈಕೆ ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆದ ಸಚಿವರು, ಬೇಸಿಗೆ ಕಾಲ ಸಮೀಪಿಸುತ್ತಿದ್ದು, ಕುಡಿಯುವ ನೀರಿನ ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು ಹಾಗೂ ಜಿಲ್ಲೆಯಲ್ಲಿರುವ ಕೆಟ್ಟು ಹೋಗಿರುವ ಶುದ್ಧ ನೀರಿನ ಘಟಕಗಳನ್ನು ದುರಸ್ತಿ ಮಾಡಿಸುವ ಮೂಲಕ ಎಲ್ಲಾ ಶುದ್ಧ ನೀರಿನ ಘಟಕಗಳನ್ನು ನಿರ್ವಹಣೆ ಕಾರ್ಯ ಆಗಬೇಕು. ನೀರು ಶುದ್ದೀಕರಣ ಘಟಕದ ನಿರ್ವಹಣೆ ಪಡೆದಿರುವ ಗುತ್ತಿಗೆದಾರರು, ಸರಿಯಾಗಿ ನಿರ್ವಹಣೆ ಮಾಡದಿದ್ದಲ್ಲಿ ಅವರನ್ನು ಕಪ್ಪು ಪಟ್ಟಿಗೆ ಸೇರಿಸುವಂತೆ ಜಿಪಂ ಸಿಇಒ ದಿಲೀಶ್ ಶಶಿಗೆ ಸೂಚಿಸಿದರು.

166 ಘಟಕ ದುರಸ್ತಿಯಲ್ಲಿವೆ: ಗ್ರಾಮೀಣ ಕುಡಿಯುವ ನೀರು ಪೂರೈಕೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ ಮಹ್ಮದ್ ಅಜಿಜುದ್ದೀನ್ ಮಾತನಾಡಿ, ಒಟ್ಟು ಜಿಲ್ಲೆಯಲ್ಲಿ 448 ನೀರು ಶುದ್ದೀಕರಣ ಘಟಕಗಳಿವೆ. 282 ಸುಸ್ಥಿತಿಯಲ್ಲಿದ್ದು, 166 ದುರಸ್ತಿಯಲ್ಲಿವೆ. ಇದರಲ್ಲಿ 62 ನೀರು ಘಟಕಗಳನ್ನು ಗ್ರಾಮ ಪಂಚಾಯತಿಗೆ ಹಸ್ತಾತರಿಸಿದ್ದು, ಇವುಗಳ ನಿರ್ವಹಣೆಯನ್ನು ಗ್ರಾಮ ಪಂಚಾಯಿತಿ ಮಾಡಬೇಕು ಎಂದು ತಿಳಿಸಿದರು.

ಜಿಲ್ಲಾ ಡಿಎಚ್‌ಒ ಡಾ. ಗಣಜಲಖೇಡ್ ಮಾತನಾಡಿ, ಗುರುವಾರದವರೆಗೆ 96 ಕೋವಿಡ್ ಪಾಸಿಟಿವ್ ರೋಗಿಗಳಿದ್ದು, 54 ರೋಗಿಗಳಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಉಳಿದ 42 ರೋಗಿಗಳನ್ನು ಹೋಂ ಐಸೋಲೇಶನ್ ಮಾಡಿ ಚಿಕಿತ್ಸೆ ನೀಡಲಾಗುತ್ತಿದೆ. ಕೋವಿಡ್ ಮೊದಲನೇ ಹಂತದ ಲಸಿಕೆ 100 ಪ್ರತಿಶತ ಮಾಡಲಾಗಿದೆ. ಎರಡನೇ ಹಂತ ಲಸಿಕೆಯನ್ನು 80 ಪ್ರತಿಶತ ಮುಗಿದೆ ಹಾಗೂ 66 ಪ್ರತಿಶತ ಮಕ್ಕಳಿಗೆ ಲಸಿಕೆ ನೀಡಲಾಗಿದೆ ಎಂದು ವಿವರಿಸಿದರು.

ಸಾಮಾಜಿಕ ಭದ್ರತೆಯ ಸಹಾಯಕ ನಿರ್ದೇಶಕಿ ಮಧುಮತಿ ಮಾತನಾಡಿ, ಜಿಲ್ಲೆಯಲ್ಲಿ ಕೋವಿಡ್‌ನಿಂದ 872 ಮೃತ ಪಟ್ಟವರ ಬಗ್ಗೆ ಲೆಕ್ಕ ತಪಾಸಣೆ ಮಾಡಿಸಲಾಗಿದೆ. ಇದರ 657 ಪ್ರಕರಣಗಳನ್ನು ಪರಿಹರಿಸಲಾಗಿದೆ. ಉಳಿದ 165 ಪ್ರಕರಣ ಬಾಕಿ ಇರುತ್ತವೆ. ಇದರಲ್ಲಿ 84 ಪ್ರಕರಣಗಳಲ್ಲಿ ತಾಂತ್ರಿಕ ದೋಷವಿದ್ದು, ಇದನ್ನ ಪರಿಹರಿಸಲು ಪ್ರಯತ್ನಿಸಲಾಗುತ್ತಿದೆ. ಬಿಪಿಎಲ್ ಕಾರ್ಡುದಾರರಿಗೆ ರಾಜ್ಯದಿಂದ ಒಂದು ಲಕ್ಷ ರು. ಕೇಂದ್ರದಿಂದ 50 ಸಾವಿರ ನೀಡಲಾಗುತ್ತಿದೆ ಹಾಗೂ ಎಪಿಎಲ್ ಕಾರ್ಡುದಾರರಿಗೆ 50 ಸಾವಿರ ರು. ಪರಿಹಾರ ನೀಡಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಕೆಕೆಆರ್‌ಡಿಬಿ ಅಧ್ಯಕ್ಷ ದತ್ತಾತ್ರೇಯ ಪಾಟೀಲ್ ರೇವೂರ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಅಧ್ಯಕ್ಷ ರಾಜಕುಮಾರ್ ತೇಲ್ಕೂರ, ಶಾಸಕರಾದ ಸುಭಾಶ್ ಗುತ್ತೇದಾರ್, ಎಂ.ವೈ. ಪಾಟೀಲ್, ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಶಶಿಕಲಾ ವಿ. ಟೆಂಗಳಿ, ಕ್ರೆಡಲ್‌ನ ಚಂದ್ರಕಾಂತ ಇದ್ದರು.

ಮಣ್ಣೂರಲ್ಲಿ ಪೊಲೀಸ್ ಪಥ ಸಂಚಲನ

• **ಕನ್ನಡಪ್ರಭ ವಾರ್ತೆ** ಅಫಜಲ್ಪುರ / ಕರಜಗಿ

ಹಿಜಾಬ-ಕೇಸರಿ ಶಾಲು ವಿವಾದದ ಹಿನ್ನೆಲೆಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಮುಂಜಾಗ್ರತಾ ಕ್ರಮವಾಗಿ ಅಫಜಲ್ಪುರ ಸಿಪಿಐ ಜಗದೇವಪ್ಪ ಪಾಳಾ ಹಾಗೂ ಪಿಎಸಐ ವಿಶ್ವನಾಥ ಮುದರೆಡ್ಡಿ ನೇತೃತ್ವದಲ್ಲಿ ಪೊಲೀಸರು ತಾಲೂಕಿನ ಮಣ್ಣೂರ ಗ್ರಾಮದಲ್ಲಿ ಪಥ ಸಂಚಲನ ನಡೆಸಿದರು.

ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ವಿಷಯ ಹೈಕೋರ್ಟ್‌ನಲ್ಲಿ ಇರುವುದರಿಂದ ತೀರ್ಪು ಬರುವವರೆಗೂ ಶಾಂತಿ ಸುವ್ಯವಸ್ಥೆ ಕಾಪಾಡಬೇಕು. ವಿವಾದಕ್ಕೆ ಸಂಬಂಧಿಸಿದ ಹೈಕೋರ್ಟ್‌ನ ಅಂತಿಮ ತೀರ್ಪಿಗೆ ಎಲ್ಲರೂ ತಲೆಬಾಗಲೇಬೇಕು. ಅಲ್ಲಿಯವರೆಗೂ ಯಾರಿಗೂ ನೋವುಂಟು ಮಾಡಬಾರದು ಮನವಿ ಮಾಡಿದರು. ಮಣ್ಣೂರ ಬಸ್ ನಿಲ್ದಾಣದಿಂದ ಆರಂಭವಾದ ಪಥ ಸಂಚಲನ, ಚನ್ನಕೇಶವ ದೇವಸ್ಥಾನ ಮಾರ್ಗವಾಗಿ ನಾವಾಡಿ ಓಣಿ, ಮಕಾನ ಗಲ್ಲಿ ಮರಗಮ್ಮಾ ದೇವಸ್ಥಾನ, ಕುಂಬಾರ ಓಣಿ, ಪೂಜಾರಿ ಓಣಿ, ಯಲ್ಲಮ್ಮ ದೇವಿ ಅಗಸಿವರೆಗೆ ಪಥ ಸಂಚಲನ ಮಾಡಲಾಯಿತು. ಪಥ ಸಂಚಲನದಲ್ಲಿ ಅಪರಾಧ ವಿಭಾಗ ಪಿಎಸ್ಐ ಸುರೇಶ ಬಾಬು, ಸಿಬ್ಬಂದಿ ಇದ್ದರು.

ಎಸ್ಟಿಗೆ ಕೋಲಿ ಸೇರ್ಪಡೆ ನಿರ್ಲಕ್ಷಿಸಿದ್ದ ಖರ್ಗೆ

ಅಂಬಿಗರ ಚೌಡಯ್ಯ ಮೂರ್ತಿ ಪ್ರತಿಷ್ಠಾಪನೆಯಲ್ಲಿ ಚಿಂಚನಸೂರ ಅಸಮಾಧಾನ

• **ಕನ್ನಡಪ್ರಭ ವಾರ್ತೆ** ಚಿತ್ತಾಪುರ

ಮಲ್ಲಿಕಾರ್ಜುನ ಖರ್ಗೆ ಅವರು ಕೋಲಿ ಸಮಾಜದ ಮತಗಳಿಂದ ಗೆದ್ದು ಎಲ್ಲ ಅಧಿಕಾರ ಅನುಭವಿಸಿದ್ದಾರೆ. ಆದರೆ ಕೋಲಿ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುವ ಮನಸ್ಸು ಮಾಡಿಲ್ಲ ಎಂದು ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬುರಾವ ಚಿಂಚನಸೂರ ಹೇಳಿದರು.

ತಾಲೂಕಿನ ಯಾಗಾಪೂರದಲ್ಲಿ ನಿಜಶರಣ ಅಂಬಿಗರ ಚೌಡಯ್ಯ ಗ್ರಾಮೀಣಾಭಿವೃದ್ಧಿ ಸೇವಾ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಮೂರ್ತಿ ಪ್ರತಿಷ್ಠಾಪನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕಾಂಗ್ರೆಸ್ ಅಧಿಕಾರವಿದ್ದಾಗ ಕೋಲಿ ಸಮಾಜ ಎಸ್‌ಟಿ ಸೇರ್ಪಡೆ ಮನವಿಯನ್ನು ದೆಹಲಿಗೆ ತೆಗೆದುಕೊಂಡು ಹೋದಾಗ ಆಗಿನ ಕೇಂದ್ರ ಕಾರ್ಮಿಕ ಮತ್ತು ಬುಡಕಟ್ಟು ಸಚಿವ ಮಲ್ಲಿಕಾರ್ಜುನ ಖರ್ಗೆ ಅವರು ಮನಸ್ಸು ಮಾಡಿದ್ರೆ ಐದೇ ನಿಮಿಷದಲ್ಲೇ ಆಗುತ್ತಿತ್ತು. ಆದರೆ ಅವರು ಮಾಡಲಿಲ್ಲ ಎಂದು ಹೇಳಿದರು.

ಕೋಲಿ ಸಮಾಜದ ಕೆಲವರಿಂದಲೇ ನಾನು ಕಳೆದ ವಿಧಾನಸಭೆ ಚುನಾವಣೆಯಲ್ಲಿ ಸೋತಿದ್ದೇನೆ. ಒಂದು ವೇಳೆ ಗೆದ್ದಿದ್ದರೆ ಇಷ್ಟೋತ್ತಿಗೆ ಕೋಲಿ ಸಮಾಜ ಎಸ್‌ಟಿಗೆ ಸೇರುತ್ತಿತ್ತು. ಆದರೆ ಈಗ ನಮ್ಮ ಶಕ್ತಿ ಸ್ವಲ್ಪ ಕಡಿಮೆ ಆಗಿದೆ. ಆದರೂ ಎದೆಗುಂದಿಲ್ಲ, ನನಗೆ ಎಷ್ಟೇ ಟೀಕೆ ಟಿಪ್ಪಣೆ ಮಾಡಿದರೂ ನಾನು ಮತ್ತೇ ಮುಂದಿನ ಚುನಾವಣೆಯಲ್ಲಿ ಗೆದ್ದು ಪ್ರಭಾವಿ ಮಂತ್ರಿಯಾಗುತ್ತೇನೆ ವಿಶ್ವಾಸ ವ್ಯಕ್ತಪಡಿಸಿದರು. ಹಿಂದುಳಿದ ವರ್ಗದಲ್ಲಿದ್ದ ಕೋಲಿ ಸಮಾಜವನ್ನು ಪ್ರವರ್ಗ-1ಕ್ಕೆ ಸೇರಿಸಿದ್ದೇನೆ. ಈಗ ಪ್ರಸ್ತುತ ತಳವಾರ ಜಾತಿಯನ್ನು ಎಸ್‌ಟಿಗೆ ಸೇರ್ಪಡೆ ಮಾಡುವಲ್ಲಿ ಶ್ರಮಿಸಿದ್ದೇನೆ. ಆದರೂ ನನಗೆ ಟೀಕೆ ಟಿಪ್ಪಣೆ ಮಾಡುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಯಾಗಾಪೂರ ಗ್ರಾಮದಲ್ಲಿ ನಡೆದ ನಿಜಶರಣ ಅಂಬಿಗರ ಚೌಡಯ್ಯನವರ ಮೂರ್ತಿ ಪ್ರತಿಷ್ಠಾಪನಾ ಸಮಾರಂಭವನ್ನು ಬಾಬುರಾವ ಚಿಂಚನಸೂರ ಉದ್ಘಾಟಿಸಿದರು.

ಮಾಜಿ ಎಂಎಲ್‌ಸಿ ತಿಪ್ಪಣ್ಣಪ್ಪ ಕಮಕನೂರ, ತೋನಸನಳ್ಳಿ ಮಲ್ಲಣ್ಣಪ್ಪ ಶ್ರೀ, ನಿಗಮದ ನಿರ್ದೇಶಕ ಶರಣಪ್ಪ ನಾಟೀಕಾರ, ಮುಖಂಡರಾದ ಮಲ್ಲಮ್ಮ ಬಿ.ನಾರಾಯಣರಾವ್, ಶರಣಪ್ಪ ಮಾನೇಗಾರ, ಲಚ್ಚಪ್ಪ ಜಮಾದಾರ, ಭೀಮಣ್ಣ ಸಾಲಿ, ಸುರೇಶ ಬೆನಕನಳ್ಳಿ, ಸುನೀತಾ ತಳವಾರ, ಅಭಿಷೇಕ ಸಣ್ಣೂರಕರ್, ಸಣ್ಣೂರ ಭರತದ್ವಾಜ್ ಸ್ವಾಮೀಜಿ, ಮಲ್ಲಯ್ಯ ಮುತ್ಯಾಶ್ರೀ, ಕೋಲಿ ಸಮಾಜದ ತಾಲೂಕು ಅಧ್ಯಕ್ಷ ಸಾಬಣ್ಣ ಡಿಗ್ಗಿ, ಅರವಿಂದ ಚವ್ಹಾಣ, ರಾಮಲಿಂಗ ಬಾನರ್, ಮಣಿಕಂಠ ರಾಠೋಡ, ಹಣಮಂತ ಸಂಕನೂರ, ರಮೇಶ ಕಮಕನೂರ, ಶರಣಪ್ಪ ನಾಶಿ, ಗುಂಡು ಐನಾಪೂರ, ಮಹೇಶ ಸಾತನೂರ, ರಘು ವಾಡಿ, ಶಂಕರ ತಳವಾರ, ಶಿವಕುಮಾರ ಯಾಗಾಪೂರ, ಶೇಖಪ್ಪ ಕಾಸಲ್, ಶಿವಪ್ಪ ಬಾಚವಾರ, ದೇವಿಂದ್ರಪ್ಪ ಚೆನಬೋ, ಹಣಮಂತ ರಾಂಪೂರ, ದೇವಿಂದ್ರ ಅರಣಕಲ್, ಕಾಶಪ್ಪ ಡೋಣಗಾಂವ, ಮೇಘನಾಥ ಚವ್ಹಾಣ, ರಾಜು ಯರಗೋಳ, ಗುರುನಾಥ ಪೋಸ್ತಾ, ಶರಣು ಡೋಣಗಾಂವ, ಅಂಬು ಹೋಳಿಕಟ್ಟಿ, ಬನ್ನಪ್ಪ ಪೋಸ್ತಾ, ಗೂಳಪ್ಪ ಭೀಮನಳ್ಳಿ, ಹಣಮಂತ ಚಾಚವಾರ, ಬಸವರಾಜ ತಳವಾರ, ಸಾಬಣ್ಣ ಕೊಟ್ರಕಿ ಇದ್ದರು.

ಯಾದಗಿರಿ, ಶಹಾಪುರದಲ್ಲಿ ಪಥಸಂಚಲನ

• **ಕನ್ನಡಪ್ರಭ ವಾರ್ತೆ** ಯಾದಗಿರಿ

ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟನಲ್ಲಿ ಪೊಲೀಸ್ ಇಲಾಖೆಯ ವತಿಯಿಂದ ಯಾದಗಿರಿ ಹಾಗೂ ಶಹಾಪುರದ ನಗರದ ಪ್ರಮುಖ ರಸ್ತೆಗಳಲ್ಲಿ ಪೊಲೀಸ್ ಪಥಸಂಚಲನ ನಡೆಯಿತು.

ಯಾದಗಿರಿ ನಗರದ ಗಾಂಧಿ ವೃತ್ತದ ಮೂಲಕ ಹತ್ತಿಕುಣಿ ಕ್ರಾಸ್, ಲಾಲ್ ಬಹಾದ್ದೂರ್ ಶಾಸ್ತ್ರಿ ಚೌಕ್, ನೇತಾಜಿ ಸುಭಾಷ್ಚಂದ್ರ ಭೋಸ್ ಹಾಗೂ ಆರ್ ಟಿಓ ಕಚೇರಿವರೆಗೆ ಪತಸಂಚಲನ ನಡೆಸಲಾಯಿತು. ಎಸ್ಪಿ ಡಾ.ಸಿ.ಬಿ.ವೇದಮೂರ್ತಿ ಸೇರಿ ಅನೇಕರು ಭಾಗವಹಿಸಿದ್ದರು.

ಶಹಾಪುರದಲ್ಲಿ ಪಥ ಸಂಚಲನ: ನಗರದ ಬಸವೇಶ್ವರ ಸರ್ಕಲ್, ಮೋಚಿ ಗಡ್ಡ, ಗಂಗಾನಗರ, ಆಸರ ಮೊಹಲ್ಲ, ಹಳೆಪೇಟೆ, ಕನ್ಯಾಕೋಳೂರು ಅಗಸಿ, ಹೊಸ ಬಸ್ ನಿಲ್ದಾಣ ಮಾರ್ಗವಾಗಿ ಪೊಲೀಸ್ ಪಥ ಸಂಚಲನ ನಡೆಯಿತು. ಈ ಸಂದರ್ಭದಲ್ಲಿ ಪಿಐ ಶ್ರೀನಿವಾಸ ಅಲ್ಲಾಪುರ ಮಾತನಾಡಿ, ಸಮಾಜದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ಸಮಾಜದ ಎಲ್ಲಾ ವರ್ಗದ ಜನತೆಯ ರಕ್ಷಣೆ ಪೊಲೀಸರ ಜವಾಬ್ದಾರಿಯಾಗಿದೆ. ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆಗೆ ಸಾರ್ವಜನಿಕರು ಸಹಕರಿಸಬೇಕೆಂದು ಮನವಿ ಮಾಡಿದರು. ಪಿಎಸ್ಐ ಚಂದ್ರಕಾಂತ್ ಮೆಕಾಲೆ, ಶ್ಯಾಮ್ ಸುಂದರ್ ನಾಯಕ ಇದ್ದರು.

ಹಳ್ಳಿಗಳಲ್ಲಿ ಕಟ್ಟುನಿಟ್ಟಾಗಿ ಅಕ್ರಮ ಮದ್ಯ ತಡೆಯಿರಿ

ಪರಿಶೀಲನಾ ಸಭೆಯಲ್ಲಿ ಡಿಸಿ ರಾಗಪ್ರಿಯಾ ಸೂಚನೆ

• **ಕನ್ನಡಪ್ರಭ ವಾರ್ತೆ** ಯಾದಗಿರಿ

ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟವಾಗದಂತೆ ಕಟ್ಟುನಿಟ್ಟಾಗಿ ಕ್ರಮಕ್ಕೆ ಮುಂದಾಗಬೇಕೆಂದು ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಆರ್.ರಾಗಪ್ರಿಯಾ ಸೂಚಿಸಿದರು

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಅಬಕಾರಿ ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಹಳ್ಳಿಗಳಲ್ಲಿ ಅನೇಕ ಜನರು ಕಡಿಮೆ ವಯಸ್ಸಿನಲ್ಲಿಯೇ ಸಾವನಪ್ಪುತ್ತಿದ್ದಾರೆ.

ಇದಕ್ಕೆ ಕಳ್ಳಭಟ್ಟಿ ಸೇವನೆಯೇ ಕಾರಣವೆಂದು ಕುಟುಂಬದವರು ಅಳಲು ತೋಡಿಕೊಳ್ಳುತ್ತಿದ್ದಾರೆ. ಹೀಗಾಗಿ ಕಳ್ಳಭಟ್ಟಿ ಸರಾಯಿ ಹಾಗೂ ಸೇಂದಿ ಸೇವನೆಯಿಂದ ಮಾನವನ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ಜನಜಾಗೃತಿ ಮೂಡಿಸುವ ಕೆಲಸ ಮಾಡುವಂತೆ ತಿಳಿಸಿದರು.

ಇಲಾಖೆ ವತಿಯಿಂದ ದಾಖಲಾದ ಪ್ರಕರಣಗಳ ಕುರಿತು ಪರಿಶೀಲಿಸಿ, 2021-22 ನೇ ಸಾಲಿನ ಮದ್ಯದ ಗುರಿಯನ್ನು ಸಾಧಿಸಲು ಜಾರಿ ಮತ್ತು ತನಿಖೆ ಕಾರ್ಯ ಚುರುಕುಗೊಳಿಸಬೇಕು. ನಶೆ ಮುಕ್ತ ಕೇಂದ್ರಗಳನ್ನು ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ನಡೆಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಅಬಕಾರಿ ಉಪ ಆಯುಕ್ತರಾದ ಫೀರೋಜಖಾನ್ ಕಿಲ್ಲೇದಾರ, ಅಬಕಾರಿ ಉಪ ಅಧೀಕ್ಷಕರಾದ ಶ್ರೀರಾಮ ರಾಠೋಡ್, ಜಿಲ್ಲಾ ವಿಚಕ್ಷಣ ದಳದ ಅಬಕಾರಿ ನಿರೀಕ್ಷಕ ಕೇದಾರನಾಥ, ಸುರಪುರ ವಲಯ ನಿರೀಕ್ಷಕ ಜಾಫರಮಿಯಾ, ಶಹಾಪುರ ವಲಯ ನಿರೀಕ್ಷಕ ವಿಜಯಕುಮಾರ್ ಹಿರೇಮಠ್, ಅಬಕಾರಿ ಉಪನಿರೀಕ್ಷಕ ಶ್ರೀಧರ ನಿರೋಣಿ, ಶರಣು ನಂದಿಗೌಡ, ಬಸವರಾಜ ರಾಜಣ್ಣರ ಹಾಗೂ ಸುರೇಶ ಮಾಳೇಕರ್ ಇದ್ದರು.

ನಾಳೆ ಸುರಪುರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಉದ್ಘಾಟನೆ

ಸುರಪುರ: ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಫೆ. 13ರಂದು ಬೆಳಗ್ಗೆ 11:30ಕ್ಕೆ ಸರ್ಕಾರಿ ಪಾಲಿಟೆಕ್ನಿಕ್, ಸುರಪುರ ಸಂಸ್ಥೆಯ ಮುಖ್ಯಕಟ್ಟಡ, ಕಾರ್ಯಾಗಾರ, 7 ಹೆಚ್ಚುವರಿ ಕೊಠಡಿಗಳ ಮತ್ತು ವಸತಿನಿಲಯಗಳನ್ನು ಉನ್ನತ ಶಿಕ್ಷಣ ಸಚಿವ ಡಾ. ಅಶ್ವಥ್‌ನಾರಾಯಣ ಉದ್ಘಾಟಿಸುವರು. ಶಾಸಕ ನರಸಿಂಹ ನಾಯಕ (ರಾಜೂಗೌಡ) ಅಧ್ಯಕ್ಷತೆ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಪ್ರಭು ಚವ್ಹಾಣ, ಸಂಸದ ರಾಜಾ ಅಮರೇಶ್ವರ ನಾಯಕ, ವಿಧಾನ ಪರಿಷತ್ ಸದಸ್ಯರಾದ ಶಶೀಲ ನಮೋಶಿ, ಚಂದ್ರಶೇಖರ ಪಾಟೀಲ್, ಭೀಮರಾಯನಗುಡಿ ಕಾಡಾ ಅಧ್ಯಕ್ಷ ಶರಣಪ್ಪ ಇತರರು ಭಾಗವಹಿಸುವರು.

ಗಂಗಾ ಕಲ್ಯಾಣ ಯೋಜನೆ: ಸೌಲಭ್ಯಕ್ಕೆ ಅರ್ಜಿ

ಯಾದಗಿರಿ: ಗಂಗಾ ಕಲ್ಯಾಣ ನೀರಾವರಿ ಯೋಜನೆಯಡಿ ಬೆಸ್ತ, ಅಂಬಿಗ, ಅಂಬಿ, ಗಂಗಾಮತ, ಕಬ್ಬಲಿಗ, ಕೋಲಿ, ಮೊಗವೀರ ಹಾಗೂ ಇದರ ಉಪಜಾತಿಗಳಿಗೆ ಒಳಪಡುವ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ. ಕನಿಷ್ಠ 2 ಎಕರೆ ಹಾಗೂ ಗರಿಷ್ಠ 5 ಎಕರೆ ಜಮೀನು ಹೊಂದಿದ್ದು, ನೀರಾವರಿ ಸೌಲಭ್ಯ ಹೊಂದಿಲ್ಲದಿರುವ ಸಣ್ಣ, ಅತಿ ಸಣ್ಣ ರೈತರಾಗಿರಬೇಕು. ವಾರ್ಷಿಕ ವರಮಾನ 98,000 ರು. ಮಿತಿಯಲ್ಲಿರಬೇಕು. ವಯಸ್ಸು ಕನಿಷ್ಠ 18 ರಿಂದ 55 ವರ್ಷದೊಳಗಿನವರಾಗಿರಬೇಕು. ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವೈಯಕ್ತಿಕ ನೀರಾವರಿ ಕೊಳವೆ ಬಾವಿಗಳಿಗೆ 2.25 ಲಕ್ಷ ರು. ಸಹಾಯಧನ ನಿಗದಿಪಡಿಸಲಾಗಿದೆ. ವೆಬ್‌ಸೈಟ್‌ನಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಮಾ.10ರಂದು ಸಂಜೆ 5.30ರೊಳಗೆ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಿದ್ದಾರೆ. ಮಾಹಿತಿಗಾಗಿ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಚೇರಿ, ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಮಿನಿ ವಿಧಾನಸೌಧ, 2ನೇ ಮಹಡಿ, ಸಿ-ಬ್ಲಾಕ್, ನಂ.ಸಿ-14, ಚಿತ್ತಾಪೂರ ರಸ್ತೆ, ದೂ: 08473-253746 ಸಂಪರ್ಕಿಸಬಹುದು.

ಸುರಪುರ: ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

ಸುರಪುರ: ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ನಾಲ್ಕು ಗೌರವಧನ ಸೇವೆ ಹುದ್ದೆಗಳಿಗೆ ಬಂದಂತಹ ಅರ್ಜಿ ಪರಿಶೀಲಿಸಿ ನೇಮಕಾತಿಯ ಮಾರ್ಗಸೂಚಿಯಂತೆ ತಾತ್ಕಾಲಿಕ ಆಯ್ಕೆ ಸಿದ್ದಪಡಿಸಿ ಹಳೆ ನ್ಯಾಯಾಲಯದ ಸಬ್ ಜೈಲ್ ಹತ್ತಿರದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಪ್ರಕಟಿಸಲಾಗಿದೆ. ಈ ಸಂಬಂಧ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸುವವರು ಸೂಕ್ತ ದಾಖಲಾತಿಯೊಂದಿಗೆ ಫೆ.18ರ ಸಂಜೆ 5:30 ರೊಳಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು. ತದನಂತರ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಎಂದು ಸಿಡಿಪಿಒ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ICICI Home Finance

ಕಾರ್ಪೋರೇಟ್ ಕಛೇರಿ : ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಟವರ್, ಅಂಧೇರಿ – ಕುರ್ಲಾ ರಸ್ತೆ, ಅಂಧೇರಿ (ಪೂರ್ವ), ಮುಂಬೈ–400059, ಭಾರತ
ಶಾಖಾ ಕಛೇರಿ : ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಡಾ. ಸವಿತಾ ಕಮರ್ಷಿಯಲ್ ಕಾಂಪ್ಲೆಕ್ಸ್, ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಐಡಿಯ ಶೋರೂಂ ಮೇಲೆ, ಕಲಬುರಗಿ, ಕರ್ನಾಟಕ 585105

(ನಿಯಮ 8(6)ಕ್ಕೆ ಪ್ರೊವಿಸೊ ಗಳನ್ನು ನೋಡಿರಿ)
ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಸೂಚನೆ

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಸೂಚನೆ 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8(6)ಕ್ಕೆ ಪ್ರಾವಿಸೋಗಳ ಜೊತೆ ಓದಿಕೊಳ್ಳಬೇಕಾದ 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಸ್ಥಿರ ಆಸ್ತಿ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆ.

ಸಾಲಗಾರ(ರ)ನಿಗೆ ಮತ್ತು ಜಾಮೀನುದಾರ(ರ)ನಿಗೆ ನಿರ್ದಿಷ್ಟವಾಗಿ ಹಾಗೂ ಸಾರ್ವಜನಿಕವಾಗಿ ವಿಸ್ತಾರವಾಗಿ ಸೂಚನೆ ನೀಡುವುದೇನೆಂದರೆ ಭದ್ರತಾ ಸಾಲಿಗನಿಗೆ (ಸೆಕ್ಯೂರ್ಡ್ ಕ್ರೆಡಿಟರ್‌ರವರಿಗೆ) ಅಡಮಾನವಾಗಿದ್ದು/ ಸುಪರ್ದೆಯಲ್ಲಿದ್ದು, ಇವುಗಳ ಭೌತಿಕ ಸ್ವಾಧೀನತೆಯನ್ನು ಐಸಿಐಸಿಐ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಗಳು ಸ್ವಾಧೀನಕ್ಕೆ ಪಡೆದುಕೊಂಡಿದ್ದು ಇವುಗಳನ್ನು "ಎಲ್ಲಿ ಹೇಗಿದೆಯೋ ಹಾಗೆಯೇ" "ಎಲ್ಲಿ ಏನಿದೆಯೋ ಹಾಗೆಯೇ" ಮತ್ತು "ಎಲ್ಲಿ ಏನಿದೆಯೋ ಹಾಗೆಯೇ" ಸ್ಥಿತಿಯಲ್ಲಿ ಮಾರಾಟ ಮಾಡಲಿದ್ದಾರೆ. ಸಂಕ್ಷಿಪ್ತ ವಿವರಣೆಗಳನ್ನು ಕೆಳಕಂಡಂತೆ ನೀಡಲಾಗಿದೆ.

ಕ್ರ ಸಂ.	ಸಾಲಗಾರನ(ರು)ಗಳ/ ಸಹ ಸಾಲಗಾರನ(ರ)/ ಜಾಮೀನುದಾರನ(ರ)ಹೆಸರು ಸಾಲದ ಖಾತಾ ಸಂ	ಭದ್ರತಾ ಆಸ್ತಿಯ ವಿವರಗಳು ತಿಳಿದಿರುವ ಋಣ ಬಾಧ್ಯತೆ ಗಳೊಂದಿಗೆ ಏನಾದರೂ ಇದ್ದಲ್ಲಿ	ಬಾಕಿಯಾಗಿ ರುವ ಮೊತ್ತ	ಮೀಸಲು ಬೆಲೆ ಅರ್ನೆಸ್ಟ್ ಹಣ ಠೇವಣಿ	ಆಸ್ತಿಯ ಪರಿಶೀಲನಾ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಮತ್ತು ಸಮಯ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)	(ಜಿ)
1.	ಬಸಯ್ಯ (ಸಾಲಗಾರರು) ಜಯಶ್ರೀ (ಸಹ-ಸಾಲಗಾರರು) ಸಾಲದ ಖಾತೆ ಸಂ. LHGUL00001317343	ಆಸ್ತಿ ಪ್ಲಾಟ್ ನಂ. 122, ಭೂಮಿ ಸರ್ವೆ ನಂ. 90-1 ಬ್ರಹ್ಮಪುರ ಗ್ರಾಮ, ಕಲಬುರಗಿ ತಾಲೂಕು, ಕಲಬುರಗಿ ಜಿಲ್ಲೆ	Rs. 40,21,328/- (As on 5th February, 2022)	Rs. 57,60,000/- Rs. 5,76,000/-	March 10, 2022 from 11:00 AM to 03:00 PM	March 14, 2022 from 02:00 PM to 03:00 PM

ಮೇಲೆ ವಿವರಿಸಲಾದ ಭದ್ರತಾ ಆಸ್ತಿಗಳ ಆನ್‌ಲೈನ್‌ನಲ್ಲಿನ ಹರಾಜು ಮಾರಾಟವು ಹರಾಜಿನ ಏಜೆನ್ಸಿಯಾದ ಆಕ್ಷನ್ ಟೈಗರ್ ಮೂಲಕ (URL Link-https:sarfaesi.auctiontiger.net/EPROC/) ... ಹರಾಜಿನ ದಿನಾಂಕದಂದು ಮಾರ್ಚ್ 11, 2022ರ ಸಾಯಂಕಾಲ 05.00ರೊಳಗಾಗಿ ... ಕಾರ್ಯಸೂಚಿಯಂತೆ ಮಾರಾಟ ಮಾಡಲಾಗುತ್ತದೆ.

ಭಾವಿ ಬಿಡ್‌ದಾರ(ರು) ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ಡಿಮಾಂಡ್ ಡ್ರಾಫ್ಟ್ (ಡಿಡಿ)ನ್ನು ... ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 13ಬಿ, ಸವಿತಾ ಕಮರ್ಷಿಯಲ್ ಕಾಂಪ್ಲೆಕ್ಸ್, ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಐಡಿಯ ಶೋರೂಂ ಮೇಲೆ, ಕಲಬುರಗಿ, ಕರ್ನಾಟಕ 585105 ... ಮಾರ್ಚ್ 11, 2022ರ 05:00 ರೊಳಗೆ ಸಲ್ಲಿಸಬೇಕು. ... "ಐಸಿಐಸಿಐ ಬ್ಯಾಂಕ್ ಲಿಮಿಟೆಡ್" ರವರ ಪರವಾಗಿ ಬೆಂಗಳೂರಿನಲ್ಲಿ ಪಾವತಿಯಾಗುವಂತಿರಬೇಕು.

ಪರಿಶೀಲನೆ, ಹರಾಜಿನ ಷರತ್ತು ಮತ್ತು ನಿಬಂಧನೆಗಳು ಅಥವಾ ಟೆಂಡರ್ ಸಲ್ಲಿಕೆಗಾಗಿನ ಇತರ ಯಾವುದೇ ಸ್ಪಷ್ಟನೆಗಾಗಿ ದಯವಿಟ್ಟು ಐಸಿಐಸಿಐ ಬ್ಯಾಂಕ್ ಲಿಮಿಟೆಡ್‌ನ ನಂ. 9819881654 ಅನ್ನು ಸಂಪರ್ಕಿಸಿರಿ.

ಅಧಿಕೃತ ಅಧಿಕಾರಿಯು ಯಾವುದೇ ಬಿಡ್‌ಗಳನ್ನು ಯಾವುದೇ/ ಎಲ್ಲ ಬಿಡ್‌ಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವುದಾದ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಮಾರಾಟದ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ದಯಮಾಡಿ ಐಸಿಐಸಿಐ ವೆಬ್‌ಸೈಟ್ www.icicihfc.com ಗೆ ಭೇಟಿ ಮಾಡಿ.

ದಿನಾಂಕ : ಫೆಬ್ರವರಿ 12, 2022
ಸ್ಥಳ : ಕಲಬುರಗಿ
ಅಧಿಕೃತ ಅಧಿಕಾರಿ
ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್

CITATION
IN THE COURT OF THE I ADDL CIVIL JUDGE (JR.DN) AT KALABURGI
(P & SC. No. 2/2022)

1) Nishat Karajagi D/o Late Mohammed Khaja@Mohammed Khaja miyan, Age: 32 years, Occ: Household. **2) Nilofar Fatima D/o Late Mohammed Khaja @ Mohammed Khaja miyan,** Age : 30 years Occ: Household. **3) Mohammed Azhar S/o Late Mohammed Khaja@Mohammed Khaja miyan,** Age: 27 years Occ: student. **4) Mohammed Zubair S/o Late Mohammed Khaja @ Mohammed Khaja miyan,** age: 23 year Occ: student. All R/o H No. 938/4 Station Bazar Road Opp Railway street Vishal Nagar 5th cross Tarfile Tq & Dist Kalaburagi.

- Petitioners.
// VERSUS //
All Concerned
- Respondent

CLAIM : SUCCESSION CERTIFICATE
WHEREAS, the above mentioned petitioner have filed petition u/s 372 of Indian succession Act 1925 seeking succession certificate before the I ADDL CIVIL JUDGE (JR DIV) at Kalaburagi.

Whereas any person concerned is hereby summoned through news paper advertisement or citation to appear in the court in person or through pleader duly instructed on **16.03.2022. at 11 clock** to answer the claim, failing the above said petition will be heard and determined ex - parte.

Given under my hand and seal of court on this the **11/02/2022**

By the order of the court
Sd/- Chief ministerial officer
Ist Addl Civil Judge (Jr Div)
Kalaburgi.

Sd/- Praveen M Kalkori
Advocate
Place : Kalaburgi Date: 11/02/2022

ಭಾರತೀಯ ಸ್ಟೇಟ್ ಬ್ಯಾಂಕ್
ಆಸ್ತಿ ವಸೂಲಿ ನಿರ್ವಹಣಾ ಶಾಖೆ, (ಎಆರ್‌ಎಂಬಿ) ಬೆಂಗಳೂರು

ಅಧಿಕೃತ ಅಧಿಕಾರಿಯವರ ವಿವರ :
ಹೆಸರು : ಶ್ರೀ ಪ್ರಶಾಂತ ಕುಮಾರ್ ಬಿಸ್ವಾಲ್
E-mail Id :sbi.40564@sbi.co.in
ಮೊಬೈಲ್ :+91 8754140264
ದೂರವಾಣಿ (ಕಚೇರಿ): 080-2594 3769

ಶಾಖೆಯ ವಿಳಾಸ : 2ನೇ ಮಹಡಿ, 'ಎ' ಬ್ಲಾಕ್, ಬಿಸಿಜಿ ಕಾಂಪ್ಲೆಕ್ಸ್, ಮೈಸೂರು ಬ್ಯಾಂಕ್ ಕಟ್ಟಡ, ಅವೆನ್ಯೂರಸ್ತೆ, ಬೆಂಗಳೂರು-560009
ಸಂಪರ್ಕಿಸಿ : ಶ್ರೀ ರಾಜೀವ್ ಮೋಹನ್
ಮೊಬೈಲ್ ಸಂ. 9771486530

ಅಪೆಂಡಿಕ್ಸ್ – IIA & IV A
[ನಿಯಮ 6(2) ಮತ್ತು 8(6)ರ ನಿಬಂಧನೆಯ ಅನ್ವಯ]
ದಿನಾಂಕ 03.03.2022 ಇ- ಹರಾಜು ಮಾರಾಟ
ಸ್ಥಿರಾಸ್ತಿ ಮತ್ತು ಚರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಸೂಚನೆ

ಸೆಕ್ಯುರಿಟೈಜೇಶನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002 ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ನಿಯಮ 6(2) ಮತ್ತು 8(6) ರ ನಿಬಂಧನೆಗಳನ್ನು ಓದಿಕೊಂಡಂತೆ ಇದರ ಅನ್ವಯ ಸ್ಥಿರಾಸ್ತಿ ಮತ್ತು ಚರಾಸ್ತಿಗಳ ಇ-ಹರಾಜು ಮಾರಾಟ ಸೂಚನೆ

1. ನಿರ್ದಿಷ್ಟವಾಗಿ ಸಾಲಗಾರರಿಗೆ/ಜಾಮೀನುದಾರರಿಗೆ/ಅಡಮಾನುದಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್‌ರಾದ ಭಾರತೀಯ ಸ್ಟೇಟ್ ಬ್ಯಾಂಕ್, ಇವರಿಗೆ ಅಡಮಾನ/ ಚಾರ್ಜ್ ಮಾಡಿರುವ ಈ ಕೆಳಗೆ ವಿವರಿಸಿರುವ ಆಸ್ತಿಯನ್ನು ಬ್ಯಾಂಕಿನ ಅಧಿಕೃತ ಅಧಿಕಾರಿಯವರು ರಚನಾತ್ಮಕವಾಗಿ ಸ್ವಾಧೀನಕ್ಕೆ ಪಡೆದುಕೊಂಡಿದ್ದು ಅದನ್ನು 'ಎಲ್ಲಿ ಹೇಗಿದೆಯೊ ಹಾಗೆ' ಮತ್ತು 'ಎಲ್ಲಿ ಏನಿದೆಯೋ ಹಾಗೆ' ಮತ್ತು 'ಮತ್ತ್ಯಾವುದಾದರೂ ಅಲ್ಲಿ ಇದ್ದಲ್ಲಿ' ಆಧಾರದ ಮೇಲೆ ಭಾರತೀಯ ಸ್ಟೇಟ್ ಬ್ಯಾಂಕ್, ಇವರಿಗೆ ಸಾಲಗಾರರು/ಅಡಮಾನುದಾರರಾದ ಮೆ. ರಾಮಲಿಂಗೇಶ್ವರ ಫ್ಲೋರ್ ಅಂಡ್ ದಾಲ್ ಮಿಲ್, ಕಲ್ಬುರ್ಗಿ ಇವರಿಂದ ಬರಬೇಕಾದ ಬಾಕಿ ಮೊತ್ತ ರೂ. 3,21,08,670/- (ರೂಪಾಯಿ ಮೂರು ಕೋಟಿ ಇಪ್ಪತ್ತೊಂದು ಲಕ್ಷದ ಎಂಟು ಸಾವಿರದ ಆರು ನೂರ ಎಪ್ಪತ್ತು ಮಾತ್ರ) ದಿನಾಂಕ 31.01.2022 ರಂತೆ ಮತ್ತು ದಿನಾಂಕ 01.02.2022 ರಿಂದ ಒಪ್ಪಿದ ದರದಲ್ಲಿ ಬಡ್ಡಿ+ಸಾಂದರ್ಭಿಕ ಖರ್ಚು, ವೆಚ್ಚ ಇತ್ಯಾದಿಗಳ ವಸೂಲಿಗಾಗಿ ದಿನಾಂಕ 03.03.2022ರಂದು ಮಾರಾಟ ಮಾಡಲಾಗುವುದು ಮತ್ತು ವಿವರಗಳು ಈ ಕೆಳಗಿನಂತಿವೆ.

ಕ್ರ ಸಂ.	ಮೀಸಲು ಬೆಲೆ (ಈ ಮೊತ್ತಕ್ಕಿಂತ ಕಡಿಮೆಗೆ ಆಸ್ತಿಯನ್ನು ಮಾರಾಟಮಾಡಲಾಗುವುದಿಲ್ಲ	ಮುಂಗಡ ಠೇವಣಿ (ಇಎಂಡಿ)	ಬಿಡ್‌ಗುಣಾಂಕ
1	ರೂ.124,00,000/-	ರೂ.12,40,000/-	ರೂ.1,00,000/-

ಆಸ್ತಿಯ ವಿವರ ತಿಳಿದಿರುವ ಋಣಭಾರಗಳೊಂದಿಗೆ (ಏನಾದರೂ ಇದ್ದಲ್ಲಿ)

(1) Tender No. SBI/ARMB/ RM/2020-21/1

ಪ್ರಾಥಮಿಕ ಭದ್ರತೆ : ಕಲಬುರ್ಗಿ – 585 101, ಕಸಬಾ ಹೋಬಳಿ, ಕಪನೂರು ಕೈಗಾರಿಕಾ ಪ್ರದೇಶ, ಕೆಐಎಡಿಬಿ 2ನೇ ಹಂತ, ಇಲ್ಲಿ ಪ್ಲಾಟ್ ನಂ. 181 ಮತ್ತು 182, ಇಲ್ಲಿ ಸ್ಥಾಪಿಸಲಾದ ಸ್ಥಾವರ ಮತ್ತು ಯಂತ್ರೋಪಕರಣಗಳು.
ಕೊಲ್ಯಾಟರಲ್ ಭದ್ರತೆ : ಕಲಬುರ್ಗಿ – 585 101, ಕಸಬಾ ಹೋಬಳಿ, ಕಪನೂರು ಕೈಗಾರಿಕಾ ಪ್ರದೇಶ, ಕೆಐಎಡಿಬಿ 2ನೇ ಹಂತ, ಇಲ್ಲಿ, ಸರ್ವೆ ನಂ. 35/3 ಮತ್ತು 37/1ರಲ್ಲಿರುವ ಪ್ಲಾಟ್ ನಂ. 179,180,181 ಮತ್ತು 182 ಈ ಆಸ್ತಿಗಳ ಚಕ್ಕುಬಂದಿ: ಪೂರ್ವಕ್ಕೆ: ಕೆಐಎಡಿಬಿ ರಸ್ತೆ ನಂ. 9, ಪಶ್ಚಿಮಕ್ಕೆ : ಪ್ಲಾಟ್ ನಂ. 183, 184 ಮತ್ತು 186, ಉತ್ತರಕ್ಕೆ: ಪ್ಲಾಟ್ ನಂ. 179 ಮತ್ತು ದಕ್ಷಿಣಕ್ಕೆ: ಕೆಐಎಡಿಬಿ ರಸ್ತೆ ನಂ. 3

2. ನಿರ್ದಿಷ್ಟವಾಗಿ ಸಾಲಗಾರರಿಗೆ/ಜಾಮೀನುದಾರರಿಗೆ /ಅಡಮಾನುದಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್‌ರಾದ ಭಾರತೀಯ ಸ್ಟೇಟ್ ಬ್ಯಾಂಕ್, ಇವರಿಗೆ ಅಡಮಾನ/ ಚಾರ್ಜ್ ಮಾಡಿರುವ ಈ ಕೆಳಗೆ ವಿವರಿಸಿರುವ ಚರಾಸ್ತಿ (ಫ್ರೀ ಹೋಲ್ಡ್)* ಮತ್ತು ಸ್ಥಿರ (ಲೀಸ್ ಹೋಲ್ಡ್) ಆಸ್ತಿಗಳನ್ನು ಬ್ಯಾಂಕಿನ ಅಧಿಕೃತ ಅಧಿಕಾರಿಯವರು ರಚನಾತ್ಮಕವಾಗಿ ಸ್ವಾಧೀನಕ್ಕೆ ಪಡೆದುಕೊಂಡಿದ್ದು ಅದನ್ನು 'ಎಲ್ಲಿ ಹೇಗಿದೆಯೊ ಹಾಗೆ' ಮತ್ತು 'ಎಲ್ಲಿ ಏನಿದೆಯೋ ಹಾಗೆ' ಮತ್ತು 'ಮತ್ತ್ಯಾವುದಾದರೂ ಅಲ್ಲಿ ಇದ್ದಲ್ಲಿ' ಆಧಾರದ ಮೇಲೆ ಭಾರತೀಯ ಸ್ಟೇಟ್ ಬ್ಯಾಂಕ್, ಇವರಿಗೆ ಸಾಲಗಾರರು/ಅಡಮಾನುದಾರರಾದ ಮೆ. ರಾಮಲಿಂಗೇಶ್ವರ ಪಲ್ಸಸ್, ಕಲ್ಬುರ್ಗಿ ಇವರಿಂದ ಬರಬೇಕಾದ ಬಾಕಿ ಮೊತ್ತ ರೂ. 2,98,94,321/- (ರೂಪಾಯಿ ಎರಡು ಕೋಟಿ ತೊಂಬತ್ತೆಂಟು ಲಕ್ಷದ ತೊಂಬತ್ತ ನಾಲ್ಕು ಸಾವಿರದ ಮುನ್ನೂರ ಇಪ್ಪತ್ತೊಂದು ಮಾತ್ರ) ದಿನಾಂಕ 31.01.2022 ರಂತೆ ಮತ್ತು ದಿನಾಂಕ 01.02.2022ರಿಂದ ಒಪ್ಪಿದ ದರದಲ್ಲಿ ಬಡ್ಡಿ+ಸಾಂದರ್ಭಿಕ ಖರ್ಚು, ವೆಚ್ಚ ಇತ್ಯಾದಿಗಳ ವಸೂಲಿಗಾಗಿ ದಿನಾಂಕ 03.03.2022ರಂದು ಮಾರಾಟ ಮಾಡಲಾಗುವುದು ಮತ್ತು ವಿವರಗಳು ಈ ಕೆಳಗಿನಂತಿವೆ.

ಕ್ರ ಸಂ.	ಮೀಸಲು ಬೆಲೆ (ಈ ಮೊತ್ತಕ್ಕಿಂತ ಕಡಿಮೆಗೆ ಆಸ್ತಿಯನ್ನು ಮಾರಾಟಮಾಡಲಾಗುವುದಿಲ್ಲ	ಮುಂಗಡ ಠೇವಣಿ (ಇಎಂಡಿ)	ಬಿಡ್‌ಗುಣಾಂಕ
2	ರೂ.109,00,000/-	ರೂ.10,90,000/-	ರೂ.1,00,000/-

ಆಸ್ತಿಯ ವಿವರ ತಿಳಿದಿರುವ ಋಣಭಾರಗಳೊಂದಿಗೆ (ಏನಾದರೂ ಇದ್ದಲ್ಲಿ)

(1) Tender No. SBI/ARMB/ RM/2021-22

ಪ್ರಾಥಮಿಕ ಭದ್ರತೆ : ಕಲಬುರ್ಗಿ – 585 101, ಕಸಬಾ ಹೋಬಳಿ, ಕಪನೂರು ಕೈಗಾರಿಕಾ ಪ್ರದೇಶ, ಕೆಐಎಡಿಬಿ 2ನೇ ಹಂತ, ಇಲ್ಲಿ ಸರ್ವೆ ನಂ. 41/2, 41/ಬಿ, 42 ರಲ್ಲಿರುವ ಪ್ಲಾಟ್ ನಂ. 213, ಇಲ್ಲಿ ಸ್ಥಾಪಿಸಲಾದ ಸ್ಥಾವರ ಮತ್ತು ಯಂತ್ರೋಪಕರಣಗಳು.
ಕೊಲ್ಯಾಟರಲ್ ಭದ್ರತೆ : ಕಲಬುರ್ಗಿ – 585 101, ಕಸಬಾ ಹೋಬಳಿ, ಕಪನೂರು ಕೈಗಾರಿಕಾ ಪ್ರದೇಶ, ಕೆಐಎಡಿಬಿ 2ನೇ ಹಂತ, ಇಲ್ಲಿ ಸರ್ವೆ ನಂ. 41/2, 41/ಬಿ, 42 ರಲ್ಲಿರುವ ಪ್ಲಾಟ್ ನಂ. 213, ಇಲ್ಲಿರುವ ಸ್ಥಾವರ ಮತ್ತು ಯಂತ್ರೋಪಕರಣಗಳನ್ನು ಒಳಗೊಂಡ ಮತ್ತು ಕಟ್ಟಡವನ್ನು ಹೊಂದಿರುವ ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ಟ್ರಾಕ್ ಮತ್ತು ಖಾಸಗಿ ಜಮೀನು, ಪಶ್ಚಿಮಕ್ಕೆ: ಪ್ಲಾಟ್ ನಂ. 212, ಉತ್ತರಕ್ಕೆ: ಪ್ಲಾಟ್ ನಂ. 81 ಮತ್ತು ದಕ್ಷಿಣಕ್ಕೆ: 12 ಮೀಟರ್ ಕೆಐಎಡಿಬಿ ರಸ್ತೆ.
ಯಶಸ್ವಿ ಖರೀದಿದಾರರಿಗೆ ಕ್ರಯ ಪತ್ರವನ್ನು ನೀಡಲು ಆಸ್ತಿ ನಂ. 2 (ಮೇಲ್ಕಂಡ ಕ್ರ. ಸಂ. 2)ರಲ್ಲಿರುವ ಆಸ್ತಿಗೆ ಕೆಐಎಡಿಬಿ ಇವರಿಗೆ ಋಣಭಾರಗಳಿದ್ದು ಇವರಿಗೆ ನೀಡಬೇಕಾದ ಬಾಕಿ ರೂ.22,70,889/- (ರೂಪಾಯಿ ಇಪ್ಪತ್ತೆರಡು ಲಕ್ಷ ಎಪ್ಪತ್ತು ಸಾವಿರದ ಎಂಟು ನೂರ ಎಂಬತ್ತೊಂಬತ್ತು ಮಾತ್ರ)ಗಳನ್ನು ಠೇವಣಿ ಇಡಬೇಕು. ಹರಾಜು ಖರೀದಿದಾರರು ನಿಯಮ ಮತ್ತು ನಿಬಂಧನೆಗಳ ಪ್ರಕಾರ ಆಸ್ತಿಯ ಮೇಲೆ (ಮೇಲ್ಕಂಡ ಕ್ರ. ಸಂ. 2) ಲೀಸ್ ಹೋಲ್ಡ್ ಹಕ್ಕುಗಳನ್ನು ಕೆಐಎಡಿಬಿ ಇವರಿಂದ ಪಡೆಯಬೇಕು.

ಮೇಲ್ಕಂಡ ಹರಾಜಿಗೆ ಸಂಬಂಧಿಸಿದ ನಿಯಮ ಮತ್ತು ನಿಬಂಧನೆಗಳ ವಿವರಗಳಿಗೆ ಸೆಕ್ಯೂರ್ಡ್ ಕ್ರೆಡಿಟರ್ ಆದ ಭಾರತೀಯ ಸ್ಟೇಟ್ ಬ್ಯಾಂಕ್, ಆಸ್ತಿ ವಸೂಲಿ ನಿರ್ವಹಣಾ ಶಾಖೆ, ಬೆಂಗಳೂರು ಪ್ರತಿನಿಧಿಸುವವರು ಇದರ ಅಧಿಕೃತ ಅಧಿಕಾರಿ ಇವರು ನೀಡಿರುವ ಲಿಂಕ್‌ಗಳಲ್ಲಿ, ಅಂದರೆ ವೆಬ್‌ಸೈಟ್ (1) www.sbi.co.in (2) www.tenders.gov.in and (3) https://www.bankeauctions.com/Sbi ನಲ್ಲಿ ವೀಕ್ಷಿಸಬಹುದು

ದಿನಾಂಕ : 08.02.2022
ಸ್ಥಳ : ಬೆಂಗಳೂರು
ಸಹಿ/-
ಅಧಿಕೃತ ಅಧಿಕಾರಿ
ಭಾರತೀಯ ಸ್ಟೇಟ್ ಬ್ಯಾಂಕ್